ಅ) *1988-89, 1989-90 ಮತ್ತು 1990-91ನೇ ಸಾಲಿನಲ್ಲಿ ಮಂಜೂರಾದ ಹೊಸ ಪಶುವೈದ್ಯ ಆಸ್ಪತ್ರೆಗಳೆಷ್ಟು? (ವಾರ್ಷಿಕವಾರು ಮಾಹಿತಿ ನೀಡುವುದು)*

ಆ) *ಚನ್ನಪಟ್ಟಣ ತಾಲ್ಲೂಕಿನಲ್ಲಿ ಹೊಸ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡಲು ಪ್ರಸ್ತಾವನೆಗಳೇನಾದರೂ ಸರ್ಕಾರದ ಮುಂದಿದೆಯೇ?*

ಇ) *ಹಾಗಿದ್ದಲ್ಲಿ ಎಂದು ಮಂಜೂರಾತಿ ನೀಡಲಾಗುವುದು?*

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು) :

ಅ)

| ವರ್ಷ | ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸುವುದು: | ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ಉನ್ನತೀಕರಿಸುವುದು: |
|---|---|---|
| 1) 1988-89 | ಇಲ್ಲ | ಇಲ್ಲ |
| 2) 1989-90 | 150 | 50 |
| 3) 1990-91 | 200 | 61 |

ಆ) ಇಲ್ಲ

ಇ) ಜಿಲ್ಲಾ ಪರಿಷತ್‌ನಿಂದ ಪ್ರಸ್ತಾವನೆ ಬಂದ ಮೇಲೆ.

ಶ್ರೀ ಸಾದತ್ ಅಲಿಖಾನ್: ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರಗಳನ್ನು ಕೊಟ್ಟಿದ್ದಾರೆ. 1988-89ರಲ್ಲಿ ಒಂದೂ ವೆಟರ್ನರಿ ಆಸ್ಪತ್ರೆ ಓಪನ್ ಮಾಡಿಲಿಲ್ಲ. 1989-90 ರಲ್ಲಿ 150 ಆಗಿದೆ. 1990-91ರಲ್ಲಿ 200 ಆಗಿದೆ. ಈಗ ಚನ್ನಪಟ್ಟಣ ತಾಲ್ಲೂಕಿನದು ಒಂದೂ ಪೆಂಡಿಂಗ್ ಇಲ್ಲ ಎಂದು ಹೇಳಿದ್ದಾರೆ. ಆದರೆ ಮೂರು ಪೆಂಡಿಂಗ್ ಇದೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಮೂರು ರೆಕಮೆಂಡ್ ಆಗಿ ಬಂದಿದೆ. ಆದರೆ ನೀವು ಇನ್‌ಫರ್‌ಮೇಷನ್ ತಪ್ಪು ಕೊಟ್ಟಿದ್ದೀರಿ. ಮತ್ತೆ ಈ ವೆಟರ್ನರಿ ಆಸ್ಪತ್ರೆಯನ್ನು ಸ್ಯಾಂಕ್ಷನ್ ಮಾಡಬೇಕಾದರೆ, What are the norms and what is the expenditure for one veterinary hosspital? ಇದು ಒಂದನೆಯದು ಎರಡನೆಯದು ಅಪ್‌ಗ್ರೇಡಿಂಗ್ ಎಂದು ಮಾಡಿದ್ದೀರಲ್ಲಾ ಅದಕ್ಕೆ ಎಷ್ಟು ಖರ್ಚಾಗುತ್ತದೆ.

ಶ್ರೀ ಬಸವರಾಜ ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಪ್ರಕಾರ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಪಶು ಚಿಕಿತ್ಸಾಲಯವಾಗಿ ಅಪ್‌ಗ್ರೇಡ್ ಮಾಡಿದರೆ ಪ್ರತಿವರ್ಷ ನಾವು 1.15 ಲಕ್ಷ ರೂಪಾಯಿಗಳನ್ನು ಹೆಚ್ಚು ವೆಚ್ಚ ಮಾಡಬೇಕಾಗುತ್ತದೆ. ಈಗ ತಾವು ಕೇಳಿದ ಪ್ರಕಾರ ಚನ್ನಪಟ್ಟಣದಲ್ಲಿ ಈ ವರ್ಷದಲ್ಲಿ ಯಾವುದಾದರೂ ವೆಟರ್ನರಿ ಆಸ್ಪತ್ರೆಯನ್ನು ತೆರೆಯುತ್ತೀರಾ ಎಂಬುದಕ್ಕೆ ಈ ವರ್ಷದಲ್ಲಿ ಜಿಲ್ಲಾ ಪರಿಷತ್ತಿನವರು ಯಾವುದೇ ಪ್ರೊಪೋಸಲ್ಲನ್ನೂ ಕಳಿಸಿಲ್ಲವಾದ್ದರಿಂದ ಈ ವರ್ಷ ಯಾವುದೂ ಇಲ್ಲವೆಂದು ಹೇಳಿದ್ದೇನೆ.

ಶ್ರೀ ಸಾದತ್ ಅಲಿಖಾನ್: ಈ ವರ್ಷ 1991-92 ರಲ್ಲಿ ಎಷ್ಟು ಪಶು ಆಸ್ಪತ್ರೆಗಳನ್ನು ತೆರೆಯಬೇಕೆಂದು ನೀವು ಟಾರ್ಗೆಟ್‌ನ್ನು ಇಟ್ಟುಕೊಂಡಿದ್ದೀರಿ?

ಶ್ರೀ ಬಸವರಾಜ ಪಾಟೀಲ್: ಈ ವರ್ಷ 220ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ತೆರೆಯಬೇಕೆಂದು ನಾವು ಟಾರ್ಗೆಟ್ ಇಟ್ಟುಕೊಂಡಿದ್ದೇವೆ..

**ಗೋಮಾಳ ಭೂಮಿಯಲ್ಲಿ ದುರ್ಬಲರಿಗೆ ನಿವೇಶನ.**

2316 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗೋಮಾಳದ ಭೂಮಿಯನ್ನು ದುರ್ಬಲವರ್ಗದವರಿಗೆ ನಿವೇಶನ ಮಂಜೂರು ಮಾಡಲು ಸರ್ಕಾರ ನಿರ್ಧರಿಸಿದೆಯೆ?*

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರು ಗೋಮಾಳಗಳಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿದ್ದರೆ ಅವರಿಗೆ ಸಾಗುವಳಿ ಖಾಯಂ ಮಾಡುವ ತೀರ್ಮಾನ ಸರ್ಕಾರ ಕೈಗೊಂಡಿದೆಯೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಹೌದು

ಆ) ಹೌದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಗೋಮಾಳದಲ್ಲಿ ಬಗರ್ ಹುಕುಂ ಮಾಡುತ್ತಿರುವ ಎಸ್‌ಸಿ, ಎಸ್‌ಟಿ, ಜನರಿಗೆ ಸಾಗುವಳಿ ಚೀಟಿಯನ್ನು ಕೊಡತಕ್ಕ ನಿರ್ಧಾರವನ್ನು ಸರ್ಕಾರ ಮಾಡಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ ಇದು ಬಹಳ ವರ್ಷಗಳ ಹಿಂದೆಯೇ ಆಗಬೇಕಾಗಿದ್ದಂಥ ಕೆಲಸ. ಈಗಲಾದರೂ ತೀರ್ಮಾನ ತೆಗೆದುಕೊಂಡಿರುವುದು ಸಂತೋಷದ ಸಂಗತಿ. ಆದರೆ ಇವರ ಜೊತೆಯಲ್ಲೇ ಅನೇಕ ಕೃಷಿ ಕಾರ್ಮಿಕರು, ಕಡು ಬಡವರು, ಮತ್ತಿತರ ಜನರು ಕಳೆದ ಸುಮಾರು 15-20 ವರ್ಷಗಳಿಂದ ಬಗರ್ ಹುಕುಂ ಸಾಗುವಳಿಯನ್ನು ಮಾಡುತ್ತಾ ಬಂದಿದ್ದಾರೆ. ಆದ್ದರಿಂದ ಇವರ ಜೊತೆಯಲ್ಲಿ ಈ ಬಡವರಿಗೂ ಸಾಗುವಳಿ ಚೀಟಿಯನ್ನು ಕೊಡುವ ಬಗ್ಗೆ ಸರ್ಕಾರ ನಿರ್ಧರವನ್ನು ತೆಗೆದುಕೊಳ್ಳುವುದು ಧರ್ಮ ಅಲ್ಲವೆ, ಒಳ್ಳೆಯದಲ್ಲವೆ?

ಇನ್ನೊಂದು ಬಹಳ ಪ್ರಮುಖ ವಿಚಾರ ಮಾನ್ಯ ಹಿರಿಯ ಸದಸ್ಯರಿಗೆ ಗೊತ್ತಿದೆ. ಬ್ರಿಟಿಷರ ಕಾಲದಿಂದ ಈ ಗೋಮಾಳಗಳು ಉಳಿದುಕೊಂಡು ಬಂದಿದ್ದುವು. ಈಗ ಯಾರು ಇದನ್ನು ಬಗರ್ ಹುಕುಂ ಮಾಡಿದ್ದಾರೆ. ಅವರು ಎಲಿಜಬಲ್ ಇದ್ದಾರೆ. ಅದು ಸರಿ ಇನ್ನು ಮುಂದಾದರೂ ಒಂದು ಎಕರೆ ಸಹ ಬಗರ್ ಹುಕುಂ ಸಾಗುವಳಿಯಾಗದಂತೆ ನೋಡಿಕೊಂಡು ಗ್ರಾಮೀಣ ಜನರು ತಮ್ಮ ಜಾನುವಾರುಗಳ ಮೇವಿಗಾಗಿ ಏನು ಮುಡುಪಾಗಿಟ್ಟಕೊಂಡು ಬಂದಿದ್ದರು ಅದನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಗೋಮಾಳಗಳಲ್ಲಿ ಹೌಸ್ ಸೈಟ್ಸ್‌ನ್ನು ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ನಾವು ಆದೇಶವನ್ನು ಕೊಟ್ಟು ಎಲ್ಲ ಜಾತಿಯವರಿಗೂ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ಕಾನೂನನ್ನೂ ಕೂಡ ತಿದ್ದುಪಡಿ ಮಾಡಿದ್ದೇವೆ. ಎಲ್ಲೆಲ್ಲಿ ಎಸ್‌ಸಿ, ಎಸ್‌ಟಿ. ಜನರು ಗೋಮಾಳಗಳನ್ನು ಸಾಗುವಳಿ ಮಾಡಿದ್ದಾರೆ ಅದನ್ನು ರೆಗ್ಯುಲರೈಸ್ ಮಾಡಬೇಕೆಂದು ಹೇಳಿದ್ದೇವೆ. ಗೋಮಾಳವಾಗಲಿ, ಬೇರೆ ಜಮೀನಾಗಲಿ ಕಾನೂನು ಪ್ರಕಾರ ಎಸ್‌ಸಿ, ಎಸ್‌ಟಿ,ಗಳಿಗೆ 50 ಪರ್ಸೆಂಟ್ ಕೊಡಬೇಕೆಂದು ಇತ್ತು, ಅದರ ಬಗ್ಗೆ ನಾವು ಅಂಕಿ ಅಂಶಗಳನ್ನು ತೆಗೆದು ನೋಡಿದಾಗ ಇದು ಕಡಿಮೆ ಎಂದು ತಿಳಿದು ಬಂದ ಮೇಲೆ ಬೇರೆಯವರಿಗೆ ಈ ಸಂದರ್ಭದಲ್ಲಿ ಅನುಕೂಲವಾದರೂ ಆಗಲಿ, ಅವರೂ ಕೂಡ ಬಡವರಿದ್ದಾರೆ, ಇವರಿಗೂ ರೆಗ್ಯೂಲರೈಸ್ ಮಾಡೋಣ, ಉಳಿದಿರತಕ್ಕ ಗೋಮಾಳ ಆಯಾ ಊರಿನವರಿಗೇ ಇರಲಿ ಎನ್ನುವ ತತ್ವವನ್ನು ನಾವು ಒಪ್ಪಿಕೊಂಡಿದ್ದೇವೆ. ಉಳಿದಿರತಕ್ಕ ಗೋಮಾಳದ ಜಮೀನನ್ನು ರೆಗ್ಯೂಲರೈಸ್ ಮಾಡಬಾರದು, ಡಿಸ್‌ಪೋಸ್ ಮಾಡಬಾರದು ಎಂದು ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದು ಸ್ವಾಭಾವಿಕವಾಗಿ ಊರಿನ ಎಲ್ಲ ಜನರಿಗೂ ಪ್ರಯೋಜನವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇದು ಬಹಳ ಪ್ರಮುಖವಾದ ಪ್ರಶ್ನೆ. ಯಾರು ಗೋಮಾಳದಲ್ಲಿ ಎಸ್‌ಸಿ, ಎಸ್‌ಟಿ,ಗಳು ಕಳೆದ 15-20 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ. ಅದನ್ನು ಆದ್ಯತೆಯ ಮೇಲೆ ರೆಗ್ಯುಲರೈಸ್ ಮಾಡಿ. ಆದರೆ, ಕಳೆದ

25-30 ವರ್ಷಗಳಿಂದ ಯಾರು ಕೃಷಿ ಕಾರ್ಮಿಕರು ಇದ್ದಾರೆ, ಒಂದು ಎಕರೆ ಜಮೀನು ಇಲ್ಲ, ಕಡು ಬಡವರು ಎಂದು ನೀವು ಗುರ್ತಿಸಿದ್ದೀರಿ ಅವರಿಗೂ ಕೂಡ ಇವರ ಜೊತೆಯಲ್ಲಿ ಸಾಗುವಳಿ ಚೀಟಿಯನ್ನು ಕೊಡತಕ್ಕದ್ದು ಧರ್ಮ ಅಲ್ಲವೆ?

ಇನ್ನು ಎರಡನೆಯದಾಗಿ ಈ ಬಗರ್ ಹುಕುಂ ಗೋಮಾಳ ಜಮೀನನ್ನು ಅವರಿಗೆ ಕೊಡುತ್ತಾರೆಂದು ತಿಳಿದಕೊಡಲೇ ಪ್ರಭಾವಿ ವ್ಯಕ್ತಿಗಳು ಈಗಾಗಲೇ ಅಲ್ಲಿ ಸಾಗುವಳಿಯನ್ನು ಮಾಡುವುದಕ್ಕೆ ಪ್ರಾರಂಭಸುವುದು ಸ್ವಾಭಾವಿಕ. ಆದ್ದರಿಂದ ತಾವು ಕೂಡಲೇ ಕ್ರಮ ತೆಗೆದುಕೊಂಡು ಸಾಗುವಳಿ ಆಗಿರುವುದು ಯಾವುದು, ಆಗದೇ ಇರುವುದು ಯಾವುದು ಎಂಬುದನ್ನು ಗುರ್ತಿಸಿ, ಊರಿನಲ್ಲಿ ಬಡವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಜಾನುವಾರುಗಳಿಗೆ ಮೇವನ್ನು ಕೊಡಲು ಗೋಮಾಳಗಳನ್ನು ಉಳಿಸಿಕೊಳ್ಳುವುದು ಬಹಳ ಅಗತ್ಯವಾಗಿದೆ. ಇದರ ಬಗ್ಗೆ ಕ್ರಮ ತೆಗೆದುಕೊಂಡು ಯಾರು ಕಡು ಬಡವರು , ಕೃಷಿ ಕಾರ್ಮಿಕರು ಇದ್ದಾರೆ ಅವರಿಗೆ ಇದನ್ನು ಕೊಡುತ್ತೀರಾ? ಮತ್ತು ಸಾಗುವಳಿ ಆಗದೇ ಇರುವ ಗೋಮಾಳವನ್ನು ಸರ್ವೆ ಮಾಡಿಸಿ ಇನ್ನು ಮುಂದೆ ಒಂದು ಗುಂಟೆ ಜಾಗಕ್ಕೂ ಯಾರೂ ಪ್ರವೇಶ ಮಾಡದಂತೆ ಗ್ರಾಮೀಣ ಜನರ ಅಭಿವೃದ್ಧಿಗೋಸ್ಕರ ಮೀಸಲಿಡದೇ ಹೋದರೆ, ಗ್ರಾಮಾಂತರ ಪ್ರದೇಶದಲ್ಲಿ ಒಂದು ಗುಂಟೆ ಜಮೀನೂ ಕೂಡ ಉಳಿಯುವುದಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಹೌಸ್ ಸೈಟ್ಸ್ ಮತ್ತು ಎಸ್‌ಸಿ, ಎಸ್‌ಟಿ, ಗಳಿಗೆ ಮಾತ್ರ ನಾವು ರೆಗ್ಯುಲರೈಸ್ ಮಾಡುತ್ತೇವೆ, ಉಳಿದವರಿಗೆ ಮಾಡುವುದಿಲ್ಲ. ಉಳಿದ ಜಮೀನನ್ನು ಸಾರ್ವಜನಿಕ ಉದ್ದೇಶಕೋಸ್ಕರ ಇಡುತ್ತೇವೆಂದು ಸ್ಪಷ್ಟಪಡಿಸುತ್ತೇನೆ.

## ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳು.

**ರಾಜ್ಯದಲ್ಲಿ ರಸಗೊಬ್ಬರದ ದಾಸ್ತಾನು**

2301 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕೇಂದ್ರ ಬಜೆಟ್ ಪೂರ್ವದಲ್ಲಿ ದಾಸ್ತಾನಾಗಿದ್ದ ರಸಗೊಬ್ಬರದ ಪ್ರಮಾಣವೆಷ್ಟು ಮತ್ತು ಇದರ ಒಟ್ಟು ಅಂದಾಜೆಷ್ಟು?*

ಆ) *ರಾಜ್ಯ ಸ್ವಾಮ್ಯದ ಕೃಷಿ ಕೈಗಾರಿಕಾ ನಿಗಮ ಮತ್ತು ರಾಜ್ಯ ಮಾರ್ಕೆಟಿಂಗ್ ಫೆಡರೇಷನ್ ಹಾಗೂ ಏಜೆಂಟರ ಇದ್ದ ರಸಗೊಬ್ಬರ ಹಾಗೂ ಕ್ರಿಮಿನಾಶಕಗಳ ಪ್ರಮಾಣವೇನು?*

ಇ) *ಈ ಬಜೆಟ್ ನಂತರದ ಬೆಲೆ ಏರಿಕೆಯಿಂದಾಗಿ ರೈತರಿಗಾಗಿರುವ ತೊಂದರೆ ಪರಿಹರಿಸಲು ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಎನ್. ಚಿಕ್ಕೆಗೌಡ (ಕೃಷಿ ಸಚಿವರು):

ಅ) ರಾಜ್ಯದಲ್ಲಿ ಕೇಂದ್ರದ ಬಜೆಟ್ ಪೂರ್ವದಲ್ಲಿ ಅಂದರೆ ದಿನಾಂಕ 24-7-91ರಂದು ಇದ್ದ ಒಟ್ಟು ವಿವಿಧ ರಸಗೊಬ್ಬರಗಳ ದಾಸ್ತಾನು (ತಯಾರಕರೂ ಸೇರಿದಂತೆ) 2,01, 145 ಮೆಟ್ರಿಕ್ ಟನ್ನುಗಳು. ಇದರ ಒಟ್ಟು ಅಂದಾಜು ಬಜೆಟ್ ಪೂರ್ವದ ಬೆಲೆಯ ಪ್ರಕಾರ 50.02 ಕೋಟಿ ರೂಪಾಯಿಗಳು.

ಆ) ರಾಜ್ಯದ ಕೃಷಿ ಕೈಗಾರಿಕಾ ನಿಗಮ, ರಾಜ್ಯ ಸಹಕಾರಿ ಮಾರಾಟ ಮಹಾ ಮಂಡಳಿ ಮತ್ತು ಖಾಸಗಿ ಮಾರಾಟಗಾರರ ಬಳಿ ಇದ್ದ ರಸಗೊಬ್ಬರದ ದಾಸ್ತಾನಿನ ವಿವರ ಈ ರೀತಿ ಇದೆ: